**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬಾಗಲಕೋಟೆ ಜಿಲ್ಲೆ, ಜಮಖಂಡಿ (ಪ್ರಸ್ತುತ ರಬಕವಿ ಬನಹಟ್ಟಿ) ತಾಲ್ಲೂಕಿನ ಹಳಿಂಗಳಿ ಹಾಗೂ ಇತರೆ 06 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ, ಇವರ ಕಡತ ಸಂ:ಗ್ರಾಕುನೀ&ನೈಇ/ಮುಇಂ/420/ತಾಂತ್ರಿಕ/2021-22

---

**ಪೀಠಿಕೆ:**

ಮೇಲೆ ಓದಲಾದ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರುರವರ ಕಡತದಲ್ಲಿ ಬಾಗಲಕೋಟೆ ಜಿಲ್ಲೆ, ಜಮಖಂಡಿ (ಪ್ರಸ್ತುತ ರಬಕವಿ ಬನಹಟ್ಟಿ) ತಾಲ್ಲೂಕಿನ ಹಳಿಂಗಳಿ ಹಾಗೂ ಇತರೆ 06 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ **ರೂ.870.00ಲಕ್ಷಗಳ** ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಯೋಜನೆಯ ಕಾಮಗಾರಿಯಲ್ಲಿ ಪಂಪಿಂಗ್ ಮೆಷಿನರಿ ಬದಲಾವಣೆ, WTP ನವೀಕರಣ ಹಾಗೂ ಪೈಪ್‌ಲೈನ್ ಬದಲಾವಣೆ ಮಾಡಲು ಅಂದಾಜು ಪಟ್ಟಿಯಲ್ಲಿ ಅನುವು ಮಾಡಿಕೊಳ್ಳಲಾಗಿದೆ. ದಿನಾಂಕ:18.08.2021ರ SLSSC ಸಭೆಯಲ್ಲಿ 2021-22ನೇ ಸಾಲಿನ JJM ಕಾರ್ಯಕ್ರಮದ ಅಡಿಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ (SLSSC ಸಭೆಯಲ್ಲಿ ಮಂಡಿಸಲಾಗಿದ್ದ JJM ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಯನ್ನು ಪರಿಗಣಿಸಲಾಗಿರುತ್ತದೆ).

ಚಾಲ್ತಿ ಪಾರದರ್ಶಕ ನೀತಿಯನ್ವಯ ನಿಯಮಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ಬಾಗಲಕೋಟೆ** ಹಾಗೂ **ಮುಖ್ಯ ಅಭಿಯಂತರರು,** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಉದ್ದೇಶಿತ ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ ಅಂದಾಜು ಮೊತ್ತ **ರೂ.870.00ಲಕ್ಷಗಳಿಗೆ** ಜಲ ಜೀವನ ಮಿಷನ್ (JJM) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ/107/ಗ್ರಾನೀಸ(4)2022 ಬೆಂಗಳೂರು, ದಿನಾಂಕ:19.02.2022** 1287

ಪೀಠಿಕೆಯಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, ಬಾಗಲಕೋಟೆ ಜಿಲ್ಲೆ, ಜಮಖಂಡಿ (ಪ್ರಸ್ತುತ ರಬಕವಿ ಬನಹಟ್ಟಿ) ತಾಲ್ಲೂಕಿನ ಹಳಿಂಗಳಿ ಹಾಗೂ ಇತರೆ 06 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪುನಃಶ್ಚೇತನ (Augmentation) ಕಾಮಗಾರಿಯ **ರೂ.870.00ಲಕ್ಷ(ಎಂಟು ನೂರ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ** ಅಂದಾಜು ಮೊತ್ತಕ್ಕೆ ಜಲ ಜೀವನ ಮಿಷನ್ **(JJM)** ಕಾರ್ಯಕ್ರಮದ ಅಡಿಯಲ್ಲಿ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. ಪ್ರಸ್ತಾಪಿತ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಅವಶ್ಯವಿರುವ ಅನುಮೋದನೆ ಪಡೆದು ನಂತರ ಮುಂದಿನ ಕ್ರಮವಹಿಸಬೇಕು. ಅನುಮೋದನೆ ನೀಡಲಾದ ಅಂದಾಜಿನ ವ್ಯಾಪ್ತಿಯೊಳಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು. ಅಂದಾಜು ಮೊತ್ತದಲ್ಲಿ ಯಾವುದೇ ರೀತಿಯ ಹೆಚ್ಚಳಕ್ಕೆ ಆಸ್ಪದ ನೀಡಬಾರದು.

3. ಎಲ್ಲಾ ತಾಂತ್ರಿಕ ಅಂಶಗಳನ್ನು JJM ಮಾರ್ಗಸೂಚಿಗಳನ್ವಯ ಪರಿಶೀಲಿಸಿದ ನಂತರ ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.

4. ಯೋಜನೆಯನ್ನು ಚಾಲ್ತಿ ಪಾರದರ್ಶಕ (KTPP ಕಾಯ್ದೆಯನ್ವಯ) ನೀತಿಯನ್ವಯ ಅನುಷ್ಠಾನಗೊಳಿಸತಕ್ಕದ್ದು.

5. ಈ ಆದೇಶದಡಿ ಅನುಮೋದನೆಗೊಂಡ ಕುಡಿಯುವ ನೀರಿನ ಯೋಜನೆಯ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಆಧರಿಸಿ ಅನುದಾನ ಬಿಡುಗಡೆ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಬಾಗಲಕೋಟೆ.**
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
8. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬಾಗಲಕೋಟೆ.**
10. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಳಗಾವಿ.**
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸಂಪಾದಕರು,**"**ಕರ್ನಾಟಕ ವಿಕಾಸ**"**, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
14. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಬಾಗಲಕೋಟೆ.**
15. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು), ಬಹುಮಹಡಿ ಕಟ್ಟಡ, ಬೆಂಗಳೂರು.
16. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ), ಬೆಂಗಳೂರು.
17. ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು), ಬಹುಮಹಡಿ ಕಟ್ಟಡ ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಗ್ರಾಕುನೀಮತ್ತುನೈ/107/ಗ್ರಾಕುನೀ(ಅ)/2022 ದಿ.19.02.2022ರ ಅನುಬಂಧ

**NAME OF WORK : AUGUMENTION OF MVS SCHEEME TO HALINGALI & OTHER 06 VILLAGES IN JAMAKHANDI TALUKA BAGALKOT DISTRICT**

**ABSTRACT OF ESTIMATE**

| Sl. No. | Name of Sub Works | Amount (In Rs.) |
|---|---|---|
| 1 | Raw water pumping machinery | 51,32,378.10 |
| 2 | Raw Water Rising main | 38,94,396.52 |
| 3 | Repair works at existing WTP | 22,58,630.93 |
| 4 | Construction of Alum room with Coagulent Dosing system & DI Unit at Exisitng WTP | 15,60,407.62 |
| 5 | Pure Water Pumping Machinary from WTP to MBT | 18,88,277.60 |
| 7 | Pure Water Gravity main | 2,23,96,545.99 |
| 8 | Proposed ISS-1 of 1.00 Lakh ltr Capacity at Golbhavi village | 8,41,198.20 |
| 9 | Proposed ISS-2 of 0.70 Lakh ltr Capacity at Kaltippi village | 7,36,748.40 |
| 10 | Proposed ISS-3 of 3.00 Lakh ltr Capacity at Yargatti village cross for chimmad village. | 21,60,037.00 |
| 11 | Construction of Pump House at Gholbhavi and Kalatippi Village | 12,07,334.16 |
| 12 | Pump House cum Store room at Yargatti cross for Chimmad village | 8,43,518.64 |
| 13 | Pumping machinery's from Proposed Sump to Reservoir | 2,82,522.00 |
| 14 | Pure Water Pumping Machinary from ISS-3 at Yaragatti to Chimmada Reservoirs | 22,21,897.60 |
| 15 | Proposed Pure water Rising main | 1,65,42,807.44 |
| 16 | Repairs to Existing ELSRs of 1.00 lakh ltr. Capacity 9.0 m staging 5 no's | 19,61,210.00 |
| 17 | Repairs to Existing ELSR-1 of 1.50 Lakh ltr 9.0 m staging at Yaragatti village | 3,60,224.49 |
| 18 | Repairs to Existing ELSR of 2.00 Lakh ltr. Capacity 3.0 m staging at Hanagandi village | 5,48,744.00 |
| 19 | Repairs to RCC GLSR of 1.0 lakh ltr capacity at Yaragatti Village | 1,03,391.30 |
| 20 | Repairs to RCC GLSR of 0.50 lakh ltr capacity at Gholabhavi Village | 80,870.43 |
| 21 | Construction of ELSR 0.25 lakh ltr, 3.0 m stg. at Hangandi | 8,25,255.47 |
| 22 | Construction of ELSR 0.50 lakh capacity 9.0m Staging at Halingali & Gholabhavi village | 28,45,553.84 |
| 23 | Construction of ELSR 1.00 lakh ltr.9.0 m staging at Sasalhatti village | 20,71,909.89 |
| 24 | Construction of ELSR 2.00 lakh Ltr. 12.00 m Staging at Chimmod village | 33,99,813.23 |
| | **(a) Sub total (excl. GST)** | **7,41,63,672.85** |
| | Add 12% GST on(a) | 88,99,640.74 |
| | **(b) Cost ( Incl. GST)** | 8,30,63,313.59 |
| | Add 5% for 3rd party inspection and DPR preparation charges on (a) | 37,08,183.64 |
| | **© Total Cost** | 8,67,71,497.23 |
| | Contigencies | 2,28,502.77 |
| | **(d) Grant Total** | **8,70,00,000.00** |

"ಅನುಮೋದಿಸಿದೆ"

ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ, ಬೆಂಗಳೂರು

**Assistant Executive Engineer**
**RDW & S Sub Division Jamakhandi**

Chief Engineer
Rural Drinking Water & Sanitation Department
1st Floor, 'E' Block, KHB Complex,
Cauvery Bhavan, K.G. Road, Bangalore-9

**Executive Engineer**
**RDW & S Division**
**Bagalkot**